<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೆಚ್.ಡಿ.ಕೋಟೆ</u>

**ಉಪಸ್ಥಿತರುಃ ಸಂತೋಷ ಕೊಠಾರಿ,**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೆಚ್.ಡಿ.ಕೋಟೆ**

# ಸಿ. ಸಿ. ನಂ. 1188/2024

ಪಿರ್ಯಾದಿಃ ಶ್ರೀ ಹೆಚ್.ಕೆ.ಕಾಳಯ್ಯ ಬಿನ್ ಲೇಟ್ ಕೆಂಪಯ್ಯ, 75 ವರ್ಷ,
ವಾಸಃ ಹೊಮ್ಮರಗಳ್ಳಿ ಗ್ರಾಮ,
ಹೆಚ್.ಡಿ.ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.
(ಶ್ರೀ.ಪುಟ್ಟರಸ.ಹೆಚ್.ಎಸ್., ವಕೀಲರು)

***ವಿರುದ್ಧ***

ಆರೋಪಿಃ ಶ್ರೀ.ಪ್ರಕಾಶ್ ಬಿನ್ ಸ್ವಾಮಿಗೌಡ @ ಗಿರಿಗೌಡ,
ವಾಸಃ ಗುಜ್ಜೆಗೌಡನಪುರ ಗ್ರಾಮ
ಜಯಪುರ ಹೋಬಳಿ, ಮೈಸೂರು ತಾಲ್ಲೂಕು.

(ಶ್ರೀ.ಪಿ.ನಾಗೇಂದ್ರ, ವಕೀಲರು)

## <u>::ಆಪಾದನೆಯ ಸಾರಾಂಶ::</u>

ಆರೋಪಿಯಾದ ನೀವು ಪಿರ್ಯಾದಿದಾರರಿಗೆ ಹಲವು ವರ್ಷಗಳಿಂದ ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ಪಿರ್ಯಾದುದಾರರ ಬಾಬ್ತು ಜಮೀನನ್ನು ಖರೀದಿ ಮಾಡುವ ಸಲುವಾಗಿ ಕ್ರಯದ ಕರಾರನ್ನು ದಿನಾಂಕ 06.07.2021 ರಂದು ರೂ.18,75,000/- ಗಳಿಗೆ ಮಾಡಿಕೊಂಡಿದ್ದು, ಸದರಿ ಕರಾರಿನ ಮುಂಗಡ ಹಣವಾಗಿ ರೂ.1,00,000/-ಗಳನ್ನು ಪಿರ್ಯಾದುದಾರರಿಗೆ ನೀಡಿದ್ದು, ಉಳಿದ ರೂ.17,75,000/-ಗಳನ್ನು ಜಮೀನಿನ ಕ್ರಯವನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ನೀಡುವುದಾಗಿ ತಿಳಿಸಿ, ಪಿರ್ಯಾದುದಾರರಿಗೆ ನೀಡಬೇಕಾಗಿರುವ ರೂ.18,75,000/- ಪೈಕಿ ಬಾಕಿ ರೂ.17,75,000/- ಗಳನ್ನು ಸಂಪೂರ್ಣವಾಗಿ ನೀಡದೆ ರೂ.15,75,000/- ಗಳನ್ನು ಮಾತ್ರವೇ ನೀಡಿ ಉಳಿದ

ರೂ.2,00,000/-ಗಳಿಗೆ ದಿನಾಂಕ 04.12.2023 ರಂದು ಮುಂಗಡ ಕಾಯ್ದಿರಿಸಿದ ಬಿ ಓ ಐ ಬ್ಯಾಂಕ್, ಕೋಟೆಹುಂಡಿ ಬ್ರಾಂಚ್, ಮೈಸೂರು ಇಲ್ಲಿಗೆ ಸಂಬಂಧಪಟ್ಟ ಎರಡು ಚೆಕ್ಕುಗಳನ್ನು ನೀಡಿದ್ದು, ಈ ಚೆಕ್ಕುಗಳಲ್ಲಿ ಒಂದು ಚೆಕ್ಕು ರೂ.50,000/- ಗಳು ಮತ್ತೊಂದು ರೂ.1,50,000/- ಗಳು. ರೂ.50,000/- ಚೆಕ್ಕು ಮಾನ್ಯವಾಗಿ ಪಿರ್ಯಾದುದಾರರು ಹಣವನ್ನು ಪಡೆದಿದ್ದು, ಉಳಿದ ರೂ.150,000/- ಹಣದ ಬಾಬ್ತು ಆರೋಪಿಯಾದ ನೀವು ನಿಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಚೆಕ್ ಸಂಖ್ಯೆ 012661 ದಿನಾಂಕ 13.06.2024 ರಂದು ರೂ.1,50,000/- ವನ್ನು ನಮೂದಿಸಿ ಬಿ ಓ ಐ ಬ್ಯಾಂಕ್., ಕೋಟೆಹುಂಡಿ ಶಾಖೆಯ ಚೆಕ್ಕನ್ನು ನೀಡಿದ್ದು, ಪಿರ್ಯಾದಿಯವರು ಸದರಿ ಚೆಕ್ ಅನ್ನು ನಗದೀಕರಿಸುವ ಸಲುವಾಗಿ ಕರ್ನಾಟಕ ಬ್ಯಾಂಕ್, ಹಂಪಾಪುರ ಶಾಖೆ, ಮೂಲಕ ಸಲ್ಲಿಸಿದಾಗ, ಸದರಿ ಚೆಕ್ "**Funds Insufficient**" ಎಂಬ ಕಾರಣ ನಮೂದಿಸಿ ದಿನಾಂಕಃ 21.06.2024 ಮತ್ತು ದಿನಾಂಕ 23.07.2024 ರಂದು ಬ್ಯಾಂಕ್ ಹಿಂಬರಹದೊಂದಿಗೆ ಎರಡು ಬಾರಿ ಅಮಾನ್ಯಗೊಂಡ ಚೆಕ್ ಹಿಂದಿರುಗಿಸಿರುತ್ತಾರೆ. ಚೆಕ್ ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿ ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ ವಕೀಲರಿಂದ ದಿನಾಂಕಃ 07.08.2024 ರಂದು ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್‌ನ ಮೊತ್ತವನ್ನು ಪಿರ್ಯಾದಿ ಬ್ಯಾಂಕಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

(ಸಂತೋಷ ಕೊಠಾರಿ )

ದಿನಾಂಕಃ02.06.2025

ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,
ಹೆಚ್.ಡಿ.ಕೋಟೆ .